## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಕ್ರಿ. ಮಿಸಿಲೆ.ನಂ.973-2020 ಪಿ.ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ವಾಸ್ತವ್ಯ | ಕೆ.ಎಸ್.ಸೋನಾ<br>ಎಂ.ಸಿದ್ದರಾಜು<br>22 ವರ್ಷ<br>ಹುಲ್ಲಹಳ್ಳಿ ಗ್ರಾಮ, ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 04-09-2024. |

**ಮುಖ್ಯ ವಿಚಾರಣೆಃ ಶ್ರೀ ಎಸ್.ಬಿ ವಕೀಲರಿಂದಃ**

ಎದುರುದಾರರು ನನ್ನ ಅಪ್ಪನಾಗಬೇಕು. ನನ್ನ ತಂದೆಯವರಿಗೆ ಸಲೂನ್ ಇದ್ದು ಅವರು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತಿದ್ದು, ವ್ಯವಸಾಯದ ಜಮೀನು ಸಹ ಇರುತ್ತದೆ. ನನ್ನ ತಂದೆ ನನ್ನನ್ನು ಮತ್ತು ನನ್ನ ತಾಯಿಯವರನ್ನು 2016 ರಲ್ಲಿ ಬಿಟ್ಟು ಹೋಗಿರುತ್ತಾರೆ. 2016 ಕ್ಕೆ ಪೂರ್ವದಲ್ಲಿ ನಮ್ಮ ತಂದೆ ನನ್ನೊಂದಿಗೆ ಇದ್ದು, ಅನಂತರ ನನ್ನ ತಂದೆಯವರು ನನ್ನ ತಾಯಿಯವರಿಗೆ ವರದಕ್ಷಿಣೆ ನೀಡುವಂತೆ ಕಿರುಕುಳ ಕೊಡಲು ಪ್ರಾರಂಭ ಮಾಡಿರುತ್ತಾರೆ. ನನ್ನ ತಂದೆಯವರಿಗೆ ಕಪ್ಪಸೋಗೆ ಗ್ರಾಮದಲ್ಲಿ ಅಂಗನವಾಡಿ ಸಹಾಯಕಳಾಗಿ ಕೆಲಸ ಮಾಡುತ್ತಿರುವ ಸಾಕಮ್ಮ ಎಂಬುವರೊಂದಿಗೆ ಅನೈತಿಕ ಸಂಬಂದ ಇದ್ದು, ಆ ವಿಷಯ ನಮಗೆ ಗೊತ್ತಾದ ನಂತರ ನಮ್ಮ ತಂದೆ ನನ್ನನ್ನು, ನನ್ನ ತಾಯಿ ಮತ್ತು ತಮ್ಮನನ್ನು ಬಿಟ್ಟು ಸಾಕಮ್ಮ ರವರೊಂದಿಗೆ ವಾಸ ಮಾಡುತ್ತಿರುತ್ತಾರೆ. ಈಗ ನಾನು ಮತ್ತು ನನ್ನ ತಮ್ಮ ನನ್ನ ತಾಯಿಯೊಂದಿಗೆ ವಾಸವಿದ್ದು ನನ್ನನ್ನು ಮತ್ತು ನನ್ನ ತಮ್ಮನನ್ನು ನನ್ನ

ತಾಯಿ ನೋಡಿಕೊಳ್ಳುತ್ತಿದ್ದಾರೆ. ನನ್ನ ವಿಧ್ಯಾಭ್ಯಾಸದ ಖರ್ಚನ್ನು ಸಹ ನನ್ನ ತಾಯಿಯವರು ಸಾಲಮಾಡಿ ಭರಿಸುತ್ತಿರುತ್ತಾರೆ.

ನನ್ನ ತಂದೆಯವರಿಗೆ ತಿಂಗಳೊಂದಕ್ಕೆ ಸಲೂನ್ ನಿಂದ ರೂ 50 ಸಾವಿರಗಳ ರೂಪಾಯಿಗಳ ಆದಾಯವಿದ್ದು, ರಿಯಲ್ ಎಸ್ಟೇಟ್ ವ್ಯಾಪಾರದಿಂದ ರೂ 25 ಸಾವಿರಗಳ ರೂಪಾಯಿಗಳ ಆದಾಯವಿದ್ದು ಮತ್ತು ವ್ಯವಸಾಯದಿಂದ ನನ್ನ ತಂದೆಗೆ ವಾರ್ಷಿಕವಾಗಿ ರೂ 3 ಲಕ್ಷ ರೂ ಗಳ ಆದಾಯವಿರುತ್ತದೆ. 2016 ರಿಂದಲೂ ನಮ್ಮ ತಂದೆಯವರು ನಮ್ಮಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವುದಿಲ್ಲ. ಹಾಗಾಗಿ ನನಗೆ ಮತ್ತು ನನ್ನ ತಮ್ಮನಿಗೆ ತಿಂಗಳೊಂದಕ್ಕೆ ರೂ 15 ಸಾವಿರಗಳ ಅವಶ್ಯಕತೆ ಇರುತ್ತದೆ. ಆದುದರಿಂದ ನಾವು ಅರ್ಜಿಯಲ್ಲಿ ಕೋರಿರುವಂತೆ ಸೂಕ್ತ ಆದೇಶ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಬೇಕೆಂದು ಕೋರುತ್ತೇನೆ. ಮುಖ್ಯೋಪಾಧ್ಯಾಯರು ಶ್ರೀ ಶ್ರೀಕಂಠೇಶ್ವರ ಹಿರಿಯ ಪ್ರಾಥಮಿಕ ಶಾಲೆಯವರು ನೀಡಿರುವ ಪ್ರಗತಿ ಪತ್ರಗಳನ್ನು ಹಾಜರುಪಡಿಸಿದ್ದು ನಿಪಿ-1 ಮತ್ತು 2 ಎಂದು, ನನ್ನ ತಾಯಿ ಮತ್ತು ತಂದೆಯವರ ವಿವಾಹದ ಆಮಂತ್ರಣಾ ಪತ್ರಿಕೆಯನ್ನು ನಿಪಿ-3 ಎಂದು, ಪಾಂಶುಪಾಲರು ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್ ರವರು ನೀಡಿರುವ Fees Structure ಹಾಜರುಪಡಿಸಿದ್ದು ನಿಪಿ-4 ಎಂದು, ಪಾಂಶುಪಾಲರು ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್ ರವರು ನೀಡಿರುವ ವ್ಯಾಸಂಗ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ-5 ಎಂದು, Fee ಸಂದಾಯ ಮಾಡಿರುವ ಸಂಬಂಧ ಮಾಡಿರುವ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 12 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯವಕಾಶ ಕೇಳಿದ್ದು, ಸಮಯವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

ಸಹಿ/ –

**2 ನೇ ಕಿ.ಪ್ರ.ದ.ನ್ಯಾದಂ. ನಂಜನಗೂಡು**